# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 2075 +2071* |
| ಸದಸ್ಯರ ಹೆಸರು: | ಶ್ರೀ ಕೆ.ಪ್ರತಾಪ್‌ಸಿಂಹ ನಾಯಕ್‌ಮತ್ತು ಡಾ|| ಉಮಾಶ್ರೀ |
| ಉತ್ತರಿಸಬೇಕಾದ ದಿನಾಂಕ: | 25.03.2026 |
| ಉತ್ತರಿಸಬೇಕಾದ ಸಚಿವರು: | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 'ಸಿ' ವರ್ಗದ ದೇವಾಲಯದ ಅರ್ಚಕರಿಗೆ ಮಾಸಿಕವಾಗಿ ಎಷ್ಟು ಗೌರವಧನ (ತಸ್ತೀಕ್) ನೀಡಲಾಗುತ್ತಿದೆ; ಈ ಗೌರವಧನವನ್ನು ಹೆಚ್ಚಿಸಲು ಸರ್ಕಾರ ಚಿಂತಿಸಿದೆಯೇ; ಹಾಗಿದ್ದಲ್ಲಿ, ಎಷ್ಟು ಗೌರವಧನ ಹೆಚ್ಚಿಸಲಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ | ಕರ್ನಾಟಕ ಇನಾಂ ರದ್ದಿಯಾತಿ ಕಾಯ್ದೆ 1955 ಮತ್ತು ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯ್ದೆ 1977ರನ್ವಯ ಧಾರ್ಮಿಕ ಸಂಸ್ಥೆಗಳು ಹೊಂದಿದ್ದ ಇನಾಂ ಜಮೀನುಗಳು ಸರ್ಕಾರದಲ್ಲಿ ವಿಹಿತವಾಗುವುದರಿಂದ ಇದಕ್ಕೆ ಪರಿಹಾರಾರ್ಥವಾಗಿ ತಸ್ತೀಕ್ ಭತ್ಯೆ ನಿಗದಿಪಡಿಸಿ ಸಂಸ್ಥೆಗಳು ಅಸ್ತಿತ್ವದಲ್ಲಿರುವವರೆಗೆ ಪಾವತಿಸಬೇಕಾಗಿರುತ್ತದೆ. ಸದರಿ ತಸ್ತೀಕ್ ಮೊತ್ತವನ್ನು 2006-07ನೇ ಸಾಲಿನಿಂದ ಕನಿಷ್ಟ ವಾರ್ಷಿಕ ಮೊತ್ತ ರೂ.6000-00 ಗಳನ್ನು ಸರ್ಕಾರದಿಂದ ಮಂಜೂರು ಮಾಡಲಾಗಿರುತ್ತದೆ.<br><br>ನಂತರದಲ್ಲಿ ವಾರ್ಷಿಕ ತಸ್ತೀಕ್ ಮೊತ್ತವನ್ನು ಕಾಲ ಕಾಲಕ್ಕೆ ಹಂತ-ಹಂತವಾಗಿ ಹೆಚ್ಚಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ:- |

| ಕ್ರ. ಸಂ. | ಸರ್ಕಾರದ ಆದೇಶಗಳು | ಮೊತ್ತ (ರೂ.ಗಳಲ್ಲಿ) |
|---|---|---|
| 1. | ಕಂಇ 03 ಮುತಬ 2006, ದಿನಾಂಕ:29.06.2006 | 6,000.00 |
| 2. | ಕಂಇ 04 ಮುತಬ 2010, ದಿನಾಂಕ:14.09.2010 | 12,000.00 |
| 3. | ಕಂಇ 10 ಮುತಬ 2012, ದಿನಾಂಕ:21.06.2013 | 24,000.00 |
| 4. | ಕಂಇ 02 ಮುತಬ 2011, ದಿನಾಂಕ:25.08.2015 | 36,000.00 |
| 5. | ಕಂಇ 04 ಮುತಬ 2017, ದಿನಾಂಕ:12.04.2017 | 48,000.00 |
| 6. | ಕಂಇ 142 ಮುಅಬಿ 2022, ದಿನಾಂಕ:11.04.2022 | 60,000.00 |

ಮುಂದುವರೆದು, 2025-26ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-435ರಲ್ಲಿ "**ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ 25,551 ಧಾರ್ಮಿಕ ಸಂಸ್ಥೆಗಳ/ ದೇವಾಲಯಗಳಲ್ಲಿರುವ ಅರ್ಚಕರಿಗೆ ಪ್ರಸ್ತುತ ಪಾವತಿಸುತ್ತಿರುವ ವಾರ್ಷಿಕ ತಸ್ತೀಕ್ ಮೊತ್ತವನ್ನು 60,000 ರೂ.ಗಳಿಂದ 72,000 ರೂ.ಗಳಿಗೆ ಹೆಚ್ಚಿಸಲಾಗುವುದು**" ಎಂದು ಘೋಷಿಸಲಾಗಿರುತ್ತದೆ.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಸದರಿ ಆಯವ್ಯಯ ಘೋಷಣೆಯಂತೆ 2025-26ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 65 ಮುಅಬಿ 2025 ದಿನಾಂಕ:22-04-2025ರನ್ವಯ ರಾಜ್ಯದ ಒಟ್ಟು 25,366 ಧಾರ್ಮಿಕ ಸಂಸ್ಥೆಗಳಿಗೆ ವಾರ್ಷಿಕ ಕನಿಷ್ಠ ರೂ.60,000/-ಗಳ ತಸ್ತೀಕ್ ಮೊತ್ತವನ್ನು ರೂ.72,000/-ಗಳಿಗೆ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿರುತ್ತದೆ.<br><br>ಪ್ರಸ್ತುತ ರಾಜ್ಯದ "ಸಿ" ವರ್ಗದ ದೇವಾಲಯಗಳಿಗೆ 2025-26ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ.65.ಮುಅಬಿ.2025, ದಿನಾಂಕ:22-04-2025 ರನ್ವಯ ವಾರ್ಷಿಕ ರೂ.72,000-00ಗಳ ತಸ್ತೀಕ್ ನೀಡಲಾಗುತ್ತಿದೆ.<br><br>ಸರ್ಕಾರವು ವಾರ್ಷಿಕ ತಸ್ತೀಕ್ ಭತ್ಯೆಯನ್ನು ಕಾಲ ಕಾಲಕ್ಕೆ ಬೇಡಿಕೆ ಮತ್ತು ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಪರಿಷ್ಕರಿಸಿಕೊಂಡು ಬರುತ್ತಿರುವುದರಿಂದ 'ಸಿ' ವರ್ಗದ ದೇವಾಲಯಗಳ ಅರ್ಚಕರಿಗೆ ಮಾಸಿಕವಾಗಿ ಗೌರವ ಧನ ನೀಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. |
| ಆ) | ರಾಜ್ಯದಲ್ಲಿ 'ಸಿ' ವರ್ಗದ ದೇವಾಲಯದ ಅರ್ಚಕರಿಗೆ ಪ್ರಸ್ತುತ ನೀಡುತ್ತಿರುವ ತಸ್ತೀಕ್ ಮೊತ್ತವೆಷ್ಟು; | ಪ್ರಸ್ತುತ ಧಾರ್ಮಿಕ ದತ್ತಿ ಇಲಾಖೆಯಡಿ ಬರುವ 'ಸಿ' ವರ್ಗದ ದೇವಾಲಯಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಕಂಇ 65 ಮುಅಬಿ 2025, ದಿನಾಂಕ:22-04-2025 ರನ್ವಯ ವಾರ್ಷಿಕ ರೂ.72,000-00 ಗಳ ತಸ್ತೀಕ್ ಮೊತ್ತವನ್ನು ನೀಡಲಾಗುತ್ತಿದೆ.<br><br>'ಸಿ' ವರ್ಗದ ದೇವಾಲಯಗಳ ಅರ್ಚಕರ ಬೇಡಿಕೆಯನ್ನು ಪರಿಗಣಿಸಿ ಸರ್ಕಾರವು 2025-26ನೇ ಸಾಲಿನಲ್ಲಿ ಆದೇಶ ಸಂಖ್ಯೆ: ಕಂಇ.65.ಮುಅಬಿ.2025, ದಿನಾಂಕ:22-04-2025 ರ ಅನ್ವಯ ಈ ಹಿಂದೆ ನೀಡಲಾಗುತ್ತಿದ್ದ ವರ್ಷಾಸನ ಮೊತ್ತವನ್ನು ರೂ.60,000/- ಗಳಿಂದ ರೂ.72,000/- ಗಳಿಗೆ ಹೆಚ್ಚಿಸಿದ್ದು, ಸದರಿ ಹೆಚ್ಚಳದಂತೆ ವರ್ಷಾಸನ ಮೊತ್ತವನ್ನು ಪಾವತಿಸಲಾಗುತ್ತಿದೆ. |
| ಇ) | ರಾಜ್ಯದಲ್ಲಿ ಮುಜರಾಯಿ ದೇವಸ್ಥಾನಗಳ ಪೈಕಿ ಶೇ 90 ಗ್ರಾಮೀಣ ಪ್ರದೇಶಗಳಲ್ಲಿರುವ 'ಸಿ' ವರ್ಗದ ದೇವಸ್ಥಾನಗಳಿದ್ದು, ಈ ದೇವಸ್ಥಾನಗಳ ಅರ್ಚಕರಿಗೆ ಪ್ರಸ್ತುತ ನೀಡುತ್ತಿರುವ ತಸ್ತೀಕ್ ಕನಿಷ್ಠ ವೇತನಕ್ಕಿಂತಲೂ ಕಡಿಮೆ ಇದ್ದು, ಆ ಅರ್ಚಕರು ಸಂಕಷ್ಟದ ಪರಿಸ್ಥಿತಿಯಲ್ಲಿದ್ದರೂ ಸಹ ಅವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಇದುವರೆವಿಗೆ ಯಾವುದೇ ಕ್ರಮವಹಿಸದಿರಲು ಕಾರಣಗಳೇನು; | i. ಕರ್ನಾಟಕ (ಮತೀಯ ಮತ್ತು ಧರ್ಮಾದಾಯ) ಇನಾಂ ರದ್ದಿಯಾತಿ ಕಾಯ್ದೆ 1955 ಅಡಿಯಲ್ಲಿ ಇನಾಂ ಜಮೀನುಗಳು ಸರ್ಕಾರದಲ್ಲಿ ವಿಹಿತವಾದ ಪ್ರಕರಣಗಳಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ ತಸ್ತೀಕ್ ಯೋಜನೆಯಡಿ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಒಟ್ಟು 25,177 ಧಾರ್ಮಿಕ ಸಂಸ್ಥೆಗಳಿಗೆ ತಸ್ತೀಕ್ ಯೋಜನೆಯಡಿ ಅನುದಾನವನ್ನು ನೀಡಲಾಗುತ್ತಿರುತ್ತದೆ.<br><br>ii. ಹಾಗೆಯೇ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಅಡಿಯಲ್ಲಿ ಇನಾಂಯೇತರ ಜಮೀನುಗಳು ಸರ್ಕಾರದಲ್ಲಿ ವಿಹಿತವಾದ ಪ್ರಕರಣಗಳಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ ವರ್ಷಾಸನ ಯೋಜನೆಯಡಿ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಒಟ್ಟು 3459 ಧಾರ್ಮಿಕ |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಸಂಸ್ಥೆಗಳಿಗೆ ವರ್ಷಾಸನ ಯೋಜನೆಯಡಿ ಅನುದಾನವನ್ನು ನೀಡಲಾಗುತ್ತಿರುತ್ತದೆ.<br><br>iii. ಪ್ರಸ್ತುತ ಸರ್ಕಾರವು ವಾರ್ಷಿಕ ರೂ.72,000/- ಗಳ ತಸ್ತೀಕ್ ಮೊತ್ತವನ್ನು ಹಾಗೂ ರೂ.72,000/- ಗಳ ವರ್ಷಾಸನ ಮೊತ್ತವನ್ನು ನೀಡಲಾಗುತ್ತಿದೆ.<br><br>iv. 'ಸಿ' ವರ್ಗದ ದೇವಾಲಯಗಳ ಅರ್ಚಕರ ಬೇಡಿಕೆಯನ್ನು ಪರಿಗಣಿಸಿ ಸರ್ಕಾರವು 2025-26ನೇ ಸಾಲಿನಲ್ಲಿ ಆದೇಶ ಸಂಖ್ಯೆ: ಕಂಇ.65.ಮುಅಬಿ.2025, ದಿನಾಂಕ:22-04-2025 ರ ಅನ್ವಯ ಈ ಹಿಂದೆ ನೀಡಲಾಗುತ್ತಿದ್ದ ವಾರ್ಷಿಕ ತಸ್ತೀಕ್ ಹಾಗೂ ವರ್ಷಾಸನ ಮೊತ್ತವನ್ನು ರೂ.60,000/- ಗಳಿಂದ ರೂ.72,000/- ಗಳಿಗೆ ಹೆಚ್ಚಿಸಿದ್ದು, ಸದರಿ ಹೆಚ್ಚಳದಂತೆ ತಸ್ತೀಕ್ ಮೊತ್ತವನ್ನು ಪಾವತಿಸಲಾಗುತ್ತಿದೆ.<br><br>v. ಹಲವಾರು ದೇವಾಲಯಗಳಲ್ಲಿ ಭಕ್ತಾದಿಗಳು ಆರತಿ ತಟ್ಟೆಗೆ ದಕ್ಷಿಣೆ ರೂಪದಲ್ಲಿ ಸಮರ್ಪಿಸುವ ಕಾಣಿಕೆ ಮೊತ್ತವು ದೇವಾಲಯದ ನಿಧಿಗೆ ಜಮೆಯಾಗುವುದಿಲ್ಲ. ಬದಲಾಗಿ ಸದರಿ ಮೊತ್ತವು ಅರ್ಚಕರಿಗೆ ಸೇರುತ್ತಿದ್ದು, ತಟ್ಟೆ ಕಾಸು ಕೂಡ ಅರ್ಚಕರಿಗೆ ಆದಾಯದ ಮೂಲವಾಗಿರುತ್ತದೆ.<br><br>vi. ಅರ್ಚಕರಿಗೆ ದೇವಾಲಯದ ಆವರಣದೊಳಗೆ ಅಥವಾ ದೇವಸ್ಥಾನದ ಹತ್ತಿರದಲ್ಲಿ ಬಾಡಿಗೆ ರಹಿತ ವಸತಿಯನ್ನು ನೀಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.<br><br>ಅಲ್ಲದೇ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಟ್ಟ 'ಸಿ' ವರ್ಗದ ದೇವಾಲಯಗಳ ಅರ್ಚಕರಿಗೆ ಮತ್ತು ದೇವಾಲಯಗಳ ನೌಕರರಿಗೆ ಈ ಕೆಳಕಂಡಂತೆ ಸೌಲಭ್ಯಗಳನ್ನು ಕಲ್ಪಿಸಲಾಗಿರುತ್ತದೆ.<br>i. ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಆದೇಶ ಸಂಖ್ಯೆ: HRICE ADM 1/778/2023 E-1213475 ದಿನಾಂಕ: 27.10.2023 ರನ್ವಯ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಅಧಿಸೂಚಿತ ದೇವಾಲಯಗಳು/ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು/ನೌಕರರು ಮರಣ ಹೊಂದಿದಲ್ಲಿ ಅವರ ಕುಟುಂಬದ ವಾರಸುದಾರರಿಗೆ ರೂ.2.00 ಲಕ್ಷಗಳ ಮರಣಾಂತ ಪರಿಹಾರ ಧನವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ನೀಡಲಾಗುತ್ತಿದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|

ಈವರೆಗೆ 33 ಜನ ಮೃತ ಅರ್ಚಕರ ಕುಟುಂಬದ ವಾರಸುದಾರರಿಗೆ ಒಟ್ಟು ರೂ.66.00 ಲಕ್ಷಗಳ ಮರಣ ಪರಿಹಾರ ಧನವನ್ನು ಪಾವತಿಸಲಾಗಿದೆ. ಇನ್ನು 18 ಪ್ರಸ್ತಾವನೆಗಳು ಪರಿಶೀಲನೆಯಲ್ಲಿರುತ್ತವೆ.

ii. ಧಾರ್ಮಿಕ ದತ್ತಿ ಆಯುಕ್ತರ ಆದೇಶ ಸಂಖ್ಯೆ: ಎಡಿಎಂ1/832/2023- E-1218664, ದಿನಾಂಕ- 27.10.2023ರನ್ವಯ ರನ್ವಯ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಅಧಿಸೂಚಿತ ದೇವಾಲಯಗಳು/ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು/ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಾರ್ಷಿಕ ಪ್ರೋತ್ಸಾಹ ಧನವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಭರಿಸಿ ಈ ಕೆಳಕಂಡಂತೆ ವಿತರಿಸಲು ಕ್ರಮವಹಿಸಲಾಗಿದೆ.

| ಕ್ರ.ಸಂ | ಶೈಕ್ಷಣಿಕ ಹಂತ | ಪ್ರೋತ್ಸಾಹ ಧನ (ರೂ.ಗಳಲ್ಲಿ) |
|---|---|---|
| 1. | ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) | 5,000/- |
| 2. | ಐ.ಟಿ.ಐ/ಜೆ.ಒ.ಸಿ/ಡಿಪ್ಲೋಮ | 5,000/- |
| 3 | ಪದವಿ ಶಿಕ್ಷಣ | 7,000/- |
| 4. | ಸ್ನಾತಕೋತ್ತರ ಪದವಿ ಶಿಕ್ಷಣ | 15,000/- |
| 5. | ಇತರೆ ವೈದ್ಯಕೀಯ ಕೋರ್ಸ್‌ಗಳು (ಆಯುರ್ವೇದಿಕ್, ಹೋಮಿಯೋಪತಿ ಮತ್ತು ಯುನಾನಿ) | 25,000/- |
| 6. | ವೈದ್ಯಕೀಯ / ಡೆಂಟಲ್ ಶಿಕ್ಷಣ | 50,000/- |
| 7. | ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್) | 25,000/- |
| 8. | ವಿದೇಶ ವ್ಯಾಸಂಗ | 1,00,000/- (ಒಂದು ಬಾರಿ ಮಾತ್ರ) |

ಈವರೆಗೆ 262 ವಿದ್ಯಾರ್ಥಿಗಳಿಗೆ ಒಟ್ಟು ರೂ.41,51,000/- ಪ್ರೋತ್ಸಾಹ ಧನವನ್ನು ಪಾವತಿಸಲಾಗಿರುತ್ತದೆ. ಇನ್ನು 15 ಪ್ರಸ್ತಾವನೆಗಳು ಪರಿಶೀಲನೆಯಲ್ಲಿರುತ್ತವೆ.

iii. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002ರ ನಿಯಮ 16ರ ಅಡಿಯಲ್ಲಿ ಅಧಿಸೂಚಿತ ಸಂಸ್ಥೆಗಳ ಅರ್ಚಕರು ಮತ್ತು ದೇವಸ್ಥಾನದ ನೌಕರರಿಗೆ ಸೇವಾಂತ ಪ್ರಯೋಜನವನ್ನು ಕಲ್ಪಿಸಲಾಗಿರುತ್ತದೆ.

iv. ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಅಧಿಸೂಚಿತ ದೇವಾಲಯ/ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರು ಹಾಗೂ ಅವರ ಕುಟುಂಬದ ಒಬ್ಬ ಸದಸ್ಯರು "ಕರ್ನಾಟಕ ಭಾರತ್ ಗೌರವ್ ಕಾಶಿ-ಗಯಾ ದರ್ಶನ ಯಾತ್ರೆ" ಯೋಜನೆಯಡಿ ಉಚಿತವಾಗಿ ಕಾಶಿ ಯಾತ್ರೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಈ) | ಯಾವ ಕಾಲಮಿತಿಯೊಳಗೆ ತಸ್ತೀಕ್ ಮೊತ್ತವನ್ನು ಕನಿಷ್ಠ 10 ಸಾವಿರ ರೂ.ಗೆ ಹೆಚ್ಚಿಸುವುದು ಹಾಗೂ ದೇವಸ್ಥಾನದ ಪೂಜಾ ದ್ರವ್ಯಗಳಿಗಾಗಿ 5 ಸಾವಿರ ರೂ. ನೀಡುವುದು ಜತೆಗೆ ದೇವಸ್ಥಾನಗಳಲ್ಲಿ ಕೆಲಸ ಮಾಡುವ ಇತರ ಉದ್ಯೋಗಿಗಳಿಗೆ ತಿಂಗಳಿಗೆ ಕನಿಷ್ಠ 5 ಸಾವಿರ ರೂ ನೀಡಲು ಅಗತ್ಯ ಕ್ರಮ ವಹಿಸಲಾಗುವುದು; | 2025-26ನೇ ಸಾಲಿನ ಆಯವ್ಯಯ ಘೋಷಣೆಯಂತೆ ಸರ್ಕಾರದ ಆದೇಶ ಸಂಖ್ಯೆ:ಕಂಇ 65 ಮುಅಬಿ 2025, ದಿನಾಂಕ:22-04-2025 ರನ್ವಯ ವಾರ್ಷಿಕ ರೂ.72,000-00 ಗಳ ತಸ್ತೀಕ್ ಮೊತ್ತವನ್ನು ನೀಡಲಾಗುತ್ತಿದೆ.<br><br>'ಸಿ' ವರ್ಗದ ದೇವಾಲಯಗಳಲ್ಲಿ ವಾರ್ಷಿಕ ತಸ್ತೀಕ್ ಅಥವಾ ವರ್ಷಾಸನ ಮೊತ್ತವಲ್ಲದೇ ಇತರ ಆದಾಯದ ಮೂಲಗಳು ಸಾಮಾನ್ಯವಾಗಿ ಇಲ್ಲದಿರುವುದರಿಂದ ಅಂತಹ ದೇವಾಲಯಗಳಲ್ಲಿ ಇತರೆ ಉದ್ಯೋಗಿಗಳನ್ನು / ನೌಕರರನ್ನು ನೇಮಕ ಮಾಡಿರುವುದಿಲ್ಲ. |
| ಉ) | ದೇವಸ್ಥಾನಗಳಿಗೆ ಸೇರಿದ ಹತ್ತಾರು ಸಾವಿರ ಎಕರೆಗಳಷ್ಟು ಭೂಮಿ ಹಾಗೂ ಅಮೂಲ್ಯ ಆಸ್ತಿ ಸಂಪತ್ತುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ದೇವಸ್ಥಾನಗಳಿಗೆ ಸೇರಿದ ಜಮೀನು ಮತ್ತು ಸ್ವತ್ತುಗಳನ್ನು ಸಂರಕ್ಷಣೆ ಮಾಡಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>1. ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ/ದೇವಾಲಯಕ್ಕೆ ಸೇರಿದ /ಛತ್ರಗಳ ಜಮೀನು ಹಾಗೂ ಇತರ ಆಸ್ತಿಗಳ ಸಂರಕ್ಷಣೆಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅ.ಸ.ಪತ್ರ ಸಂ:ಮುಕಾ/ 1265/ 2020, ದಿನಾಂಕ: 11.12.2020 ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಿ ದೇವಾಲಯದ ಜಮೀನುಗಳನ್ನು ಆದ್ಯತೆ ಮೇರೆಗೆ ಅಳತೆ ಮಾಡಿ ನಕ್ಷೆ ತಯಾರಿಸಲು ಹಾಗೂ ಕನಿಷ್ಠ ತಿಂಗಳಿಗೆ ಒಂದು ತಾಲ್ಲೂಕಿನಲ್ಲಿ 5 ದೇವಾಲಯಗಳ ಆಸ್ತಿಯನ್ನು ಸರ್ವೆ ಮಾಡಿ ದಾಖಲೀಕರಣ ಗೊಳಿಸಿ ವರದಿಯನ್ನು ಸಲ್ಲಿಸಲು ಸಹಾಯಕ ದತ್ತಿ ಸಮೀಕ್ಷಾಧಿಕಾರಿಗಳಾಗಿರುವ ಭೂದಾಖಲೆಗಳ ಉಪ ನಿರ್ದೇಶಕರಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ.<br><br>2. ಸರ್ಕಾರದ ಪತ್ರ ಸಂಖ್ಯೆ:ಕಂಇ 49 ಮುಅಬಿ 2021, ದಿನಾಂಕ:11.11.2021ರಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚಿತವಾಗಿರುವ ಧಾರ್ಮಿಕ ಸಂಸ್ಥೆಗಳ/ದೇವಸ್ಥಾನಗಳ ಹೆಸರು, ಅವುಗಳಿಗೆ ಸೇರಿದ ಜಮೀನುಗಳು ಆರ್.ಟಿ.ಸಿಯಲ್ಲಿ ನಮೂದಾಗಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಿ ನಮೂದಾಗದೇ ಇದ್ದಲ್ಲಿ ಆರ್.ಟಿ.ಸಿ.ಯಲ್ಲಿ "ದೇವಾಲಯದ ಹೆಸರು" – "ಧಾರ್ಮಿಕ ದತ್ತಿ ಇಲಾಖೆ" ಎಂದು ನಮೂದಿಸುವ ಕಾರ್ಯವನ್ನು ಕಂದಾಯ ತಹಸೀಲ್ದಾರ್ ಮತ್ತು ಕಂದಾಯ ಇಲಾಖೆಯ ಸಿಬ್ಬಂದಿಗಳು ಪೂರ್ಣಗೊಳಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಕಂದಾಯ ಇಲಾಖೆ ರವರು ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತಾರೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | 3. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:WP/27/2018(LB-RES)ರ ದಿನಾಂಕ: 04.09.2023ರ ತೀರ್ಪಿನಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿರುತ್ತದೆ.<br><br>"Learned Additional Government Advocate is also directed to bring the above observations to the notice of the Endowment Commissioner. Who shall inform all the concerned authorities to make necessary entries in the name of the deity whenever any property is transferred to such temple. Either by a government agency or by a private person. All the properties are necessarily to stand in the name of the deity and the managing committee or any other person managing the temple would no have any individual right title or interest in the said property"<br><br>4. ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 14.09.2023ರ ತೀರ್ಪಿನಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ:HRICE-LAW0LAW/91/2023 (1203396) ದಿನಾಂಕ:02.11.2023, ದಿನಾಂಕ:01.12.2023 ಹಾಗೂ HRICE-LND0ADM3/1/2026-E-2026334 ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ ಸೂಚನೆಯನ್ನು ನೀಡಲಾಗಿರುತ್ತದೆ.<br><br>ರಾಜ್ಯದ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಸಂರಕ್ಷಣೆಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>1. 2023ಕ್ಕಿಂತ ಮೊದಲು 9148 ಅಧಿಸೂಚಿತ ಮುಜರಾಯಿ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಳತೆಯಾಗಿರುತ್ತದೆ.<br><br>2023 ರಿಂದ 2025ರ ಅವಧಿಯಲ್ಲಿ 9872 ಅಧಿಸೂಚಿತ ಮುಜರಾಯಿ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಳತೆಯಾಗಿ ರುತ್ತದೆ.<br><br>ಈವರೆವಿಗೆ ರಾಜ್ಯದಲ್ಲಿ 19,020 ಅಧಿಸೂಚಿತ ಮುಜರಾಯಿ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಳತೆ ಯಾಗಿರುತ್ತದೆ. **(ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ)** |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | 2. 2023 ರಿಂದ 2025ರ ಅವಧಿಯಲ್ಲಿ 9203 ಅಧಿಸೂಚಿತ ಮುಜರಾಯಿ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಖಾತೆಯಾಗಿ ರುತ್ತದೆ<br><br>ಒಟ್ಟು 20,730 ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳನ್ನು ಖಾತ ಮಾಡಿಸಲು ಕ್ರಮವಹಿಸಲಾಗಿದೆ. **(ವಿವರವನ್ನು ಅನುಬಂಧ-2 ರಲ್ಲಿ ಒದಗಿಸಿದೆ)**<br><br>2023 ರಿಂದ 2025ರ ಅವಧಿಯಲ್ಲಿ 4109 ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳನ್ನು "ಧಾರ್ಮಿಕ ದತ್ತಿ ಇಲಾಖೆ" ಎಂದು ಖಾತೆ ನವೀಕರಣ ಮಾಡಲಾಗಿದೆ.<br><br>3. ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಕ್ರಮ ಪರಭಾರೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ದೇವಾಲಯಗಳ ಸ್ವತ್ತುಗಳ ಪಹಣಿಗಳನ್ನು ಹಾಗೂ ಖಾತೆಗಳನ್ನು Flag ಮಾಡಿಸಲು ಕ್ರಮವಹಿಸಲಾಗಿದೆ.<br><br>4. ಈವರೆವಿಗೆ ಅಧಿಸೂಚಿತ ದೇವಸ್ಥಾನಗಳ ಒಟ್ಟು 309-32 ಎಕರೆ-ಗುಂಟೆ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. **(ವಿವರವನ್ನು ಅನುಬಂಧ-3 ರಲ್ಲಿ ಒದಗಿಸಿದೆ)**<br><br>5. ಅಧಿಸೂಚಿತ ದೇವಾಲಯಗಳ ಜಮೀನುಗಳ ಸಂರಕ್ಷಣೆಗಾಗಿ ಕೆಲವು ಕಡೆ ಬೇಲಿಗಳನ್ನು ನಿರ್ಮಿಸಲಾಗಿದೆ. ಎಲ್ಲಾ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ ನಿಖರ ಮಾಹಿತಿಗಾಗಿ ಜಿಯೋ ಫೆನ್ಸಿಂಗ್ ಮಾಡಿಸಲು ಪರಿಶೀಲಿಸಲಾಗುತ್ತಿದೆ.<br><br>6. 2023 ರಿಂದ 2025ರ ಅವಧಿಯಲ್ಲಿ ಒಟ್ಟು 1800 ಅಧಿಸೂಚಿತ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಸ್ವತ್ತುಗಳನ್ನು ಕಾಯ್ದೆಯ ಕಲಂ 31(7)ರಡಿಯಲ್ಲಿ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. **(ವಿವರವನ್ನು ಅನುಬಂಧ-4 ರಲ್ಲಿ ಒದಗಿಸಿದೆ).**<br><br>2025-26ನೇ ಸಾಲಿನ ಆಯವ್ಯಯ ಘೋಷಣೆಯ ಕಂಡಿಕೆ-434ರಲ್ಲಿ **"ರಾಜ್ಯದಲ್ಲಿ ಒತ್ತುವರಿಯಾಗಿರುವ 328 ದೇವಾಲಯಗಳ ಆಸ್ತಿಗಳನ್ನು ಸಂರಕ್ಷಿಸಲು ಒತ್ತುವರಿಯನ್ನು ತೆರವುಗೊಳಿಸಲಾಗುವುದು. 'ಭೂ-ವರಾಹ' ಯೋಜನೆಯಡಿಯಲ್ಲಿ ಈ ದೇವಾಲಯಗಳ ಸ್ಥಿರಾಸ್ತಿಗಳನ್ನು ದಾಖಲೀಕರಣಗೊಳಿಸಲಾಗುವುದು ದಾಖಲೀಕರಣಗೊಳಿಸಲಾಗುವುದು"** ಎಂದು ಘೋಷಣೆಯಾಗಿರುತ್ತದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಸದರಿ ಘೋಷಣೆಯಂತೆ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ದೇವಾಲಯಗಳ ಸ್ಥಿರಾಸ್ತಿಗಳ ಸರ್ವೆ ಕಾರ್ಯ, ದಾಖಲೀಕರಣ, ಒತ್ತುವರಿ ತೆರವು ಮತ್ತು ಜಮೀನುಗಳ ಸಂರಕ್ಷಣೆಯನ್ನು ಪ್ರಮುಖ ಆದ್ಯತೆಯಾಗಿ ಪರಿಗಣಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಭೂ-ವರಾಹ ಯೋಜನೆಯನ್ನು ಜಾರಿಗೊಳಿಸಲು ಸಚಿವ ಸಂಪುಟದ ಅನುಮೋದನೆಯನ್ನು ಪಡೆದು, ಈ ಯೋಜನೆಗೆ 2025-26ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ ಕಂಇ 27 ಮುಆಬಿ 2025 ದಿನಾಂಕ:12-02-2026ರಲ್ಲಿ ಒಟ್ಟು ರೂ.1500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. |

ಸಂಖ್ಯೆ:ಕಂಇ 93 ಮುಸಪ್ರ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು

## ಮುಜರಾಯಿ ದೇವಾಲಯ/ಆಸ್ತಿಗಳ ವಿವರ

| | | ಅಧಿಸೂಚಿತ ಮುಜರಾಯಿದೇವಾಲಯಗಳಸಂಖ್ಯೆ | | | | ಒಟ್ಟು ಅಧಿಸೂಚಿತ ದೇವಾಲಯ ಮತ್ತು ಆಸ್ತಿಗಳ ಸಂಖ್ಯೆ | | | | ಅಳತೆ ಪ್ರಗತಿ | | | | |
|---|---|---|---|---|---|---|---|---|---|---|---|---|---|---|
| ಕ್ರಮ ಸಂಖ್ಯೆ | ಜಿಲ್ಲೆ | A | B | C | ಒಟ್ಟು ಅಧಿಸೂಚಿತ ದೇವಾಲಯಗಳ ಸಂಖ್ಯೆ | A | B | C | ಒಟ್ಟು | A | B | C | ಒಟ್ಟು ಅಳತೆಯಾಗಿರುವ ವಿವರ | ಬಾಕಿ |
| 1 | ಬೆಂಗಳೂರು ನಗರ | 22 | 16 | 1066 | 1104 | 62 | 31 | 1132 | 1225 | 19 | 13 | 162 | 194 | 1031 |
| 2 | ಬೆಂಗಳೂರು ಗ್ರಾಮಾಂತರ | 3 | 5 | 1132 | 1140 | 15 | 17 | 1218 | 1250 | 12 | 15 | 1209 | 1236 | 14 |
| 3 | ರಾಮನಗರ | 7 | 5 | 855 | 867 | 52 | 26 | 1855 | 1933 | 32 | 4 | 463 | 499 | 1434 |
| 4 | ಚಿಕ್ಕಬಳ್ಳಾಪುರ | 3 | 4 | 1065 | 1072 | 16 | 37 | 1917 | 1970 | 3 | 4 | 569 | 576 | 1394 |
| 5 | ತುಮಕೂರು | 9 | 10 | 2442 | 2461 | 45 | 31 | 2674 | 2750 | 7 | 4 | 671 | 682 | 2068 |
| 6 | ಕೋಲಾರ | 6 | 7 | 1315 | 1328 | 39 | 27 | 2038 | 2104 | 33 | 20 | 307 | 360 | 1744 |
| 7 | ಚಿತ್ರದುರ್ಗ | 4 | 4 | 297 | 305 | 19 | 5 | 420 | 444 | 3 | 4 | 212 | 219 | 225 |
| 8 | ಶಿವಮೊಗ್ಗ | 4 | 2 | 637 | 643 | 38 | 2 | 961 | 1001 | 9 | 2 | 363 | 374 | 627 |
| 9 | ದಾವಣಗೆರೆ | 3 | 7 | 611 | 621 | 4 | 13 | 774 | 791 | 0 | 4 | 385 | 389 | 402 |
| 10 | ಮೈಸೂರು | 5 | 4 | 1302 | 1311 | 35 | 11 | 2018 | 2064 | 30 | 4 | 1107 | 1141 | 923 |
| 11 | ಮಂಡ್ಯ | 10 | 13 | 2099 | 2122 | 70 | 30 | 2888 | 2988 | 4 | 0 | 191 | 195 | 2793 |
| 12 | ದಕ್ಷಿಣ ಕನ್ನಡ | 45 | 35 | 415 | 495 | 483 | 181 | 963 | 1627 | 15 | 16 | 184 | 215 | 1412 |
| 13 | ಚಿಕ್ಕ ಮಗಳೂರು | 3 | 9 | 868 | 880 | 8 | 41 | 943 | 992 | 8 | 29 | 550 | 587 | 405 |
| 14 | ಚಾಮರಾಜನಗರ | 2 | 2 | 410 | 414 | 14 | 14 | 545 | 573 | 5 | 14 | 307 | 326 | 247 |
| 15 | ಕೊಡಗು | 3 | | 4 | 7 | 74 | 0 | 41 | 115 | 74 | 0 | 41 | 115 | 0 |
| 16 | ಹಾಸನ | 6 | 6 | 2444 | 2456 | 41 | 14 | 2799 | 2854 | 41 | 14 | 2799 | 2854 | 0 |
| 17 | ಉಡುಪಿ | 25 | 19 | 766 | 810 | 308 | 179 | 788 | 1275 | 25 | 19 | 269 | 313 | 962 |
| 18 | ಗುಲ್ಬರ್ಗಾ | 4 | 2 | 1624 | 1630 | 23 | 10 | 1624 | 1657 | 4 | 2 | 1624 | 1630 | 27 |
| 19 | ಯಾದಗಿರಿ | 2 | 3 | 1207 | 1212 | 2 | 11 | 1223 | 1236 | 2 | 3 | 848 | 853 | 383 |
| 20 | ಬಳ್ಳಾರಿ | 3 | 4 | 654 | 661 | 7 | 9 | 697 | 713 | 0 | 1 | 421 | 422 | 291 |
| 21 | ವಿಜಯನಗರ | 10 | 7 | 621 | 638 | 17 | 14 | 760 | 791 | 7 | 2 | 371 | 380 | 411 |
| 22 | ರಾಯಚೂರು | 4 | 1 | 1282 | 1287 | 20 | 2 | 1282 | 1304 | 2 | 1 | 225 | 228 | 1076 |
| 23 | ಕೊಪ್ಪಳ | 3 | 0 | 736 | 739 | 36 | 0 | 783 | 819 | 2 | 0 | 220 | 222 | 597 |
| 24 | ಬೀದರ್ | 7 | 3 | 520 | 530 | 21 | 9 | 1052 | 1082 | 7 | 3 | 248 | 258 | 824 |
| 25 | ಬೆಳಗಾವಿ | 5 | 5 | 3796 | 3806 | 247 | 12 | 4301 | 4560 | 5 | 5 | 1634 | 1644 | 2916 |
| 26 | ಬಾಗಲಕೋಟೆ | 0 | 1 | 1165 | 1166 | 0 | 1 | 1169 | 1170 | 0 | 1 | 895 | 896 | 274 |
| 27 | ಉತ್ತರ ಕನ್ನಡ | 9 | 8 | 684 | 701 | 49 | 53 | 1357 | 1459 | 9 | 5 | 331 | 345 | 1114 |
| 28 | ಹಾವೇರಿ | 1 | 11 | 1279 | 1291 | 8 | 62 | 1279 | 1349 | 0 | 10 | 414 | 424 | 925 |
| 29 | ವಿಜಯಪುರ | | 1 | 550 | 551 | 0 | 23 | 550 | 573 | 0 | 0 | 409 | 409 | 164 |
| 30 | ಗದಗ್ | 0 | 0 | 1388 | 1388 | 0 | 0 | 1422 | 1422 | 0 | 0 | 451 | 451 | 971 |
| 31 | ಧಾರವಾಡ | 0 | 0 | 930 | 930 | 0 | 0 | 947 | 947 | 0 | 0 | 583 | 583 | 364 |
| | | **208** | **194** | **34164** | **34566** | **1753** | **865** | **42420** | **45038** | **358** | **199** | **18463** | **19020** | **26018** |



File No. RD/81/MSPA/2026-MUZ-REVENUE DEPATMENT SEC (Computer No. 2106551)
Generated from eOffice by MADEV NARASANNAVAR, RD-MUZ-ASST(MN), ASSISTANT, REVENUE DEPARTMENT SEC on 24/03/2026 11:13 AM

## ಮುಜರಾಯಿ ದೇವಾಲಯ/ಆಸ್ತಿಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆ | ಅಧಿಸೂಚಿತ ಮುಜರಾಯಿದೇವಾಲಯಗಳಸಂಖ್ಯೆ | | | | ಒಟ್ಟು ಅಧಿಸೂಚಿತ ದೇವಾಲಯ ಮತ್ತು ಆಸ್ತಿಗಳ ಸಂಖ್ಯೆ | | | | ಖಾತೆ ಪ್ರಗತಿ | | | | |
|---|---|---|---|---|---|---|---|---|---|---|---|---|---|---|
| | | A | B | C | ಒಟ್ಟು ಅಧಿಸೂಚಿತ ದೇವಾಲಯಗಳ ಸಂಖ್ಯೆ | A | B | C | ಒಟ್ಟು | A | B | C | ಒಟ್ಟು ಖಾತೆಯಾಗಿರುವ ಪ್ರಕರಣಗಳ ವಿವರ | ಬಾಕಿ |
| 1 | ಬೆಂಗಳೂರು ನಗರ | 22 | 16 | 1066 | 1104 | 62 | 31 | 1132 | 1225 | 22 | 16 | 998 | 1036 | 189 |
| 2 | ಬೆಂಗಳೂರು ಗ್ರಾಮಾಂತರ | 3 | 5 | 1132 | 1140 | 15 | 17 | 1218 | 1250 | 12 | 15 | 1209 | 1236 | 14 |
| 3 | ರಾಮನಗರ | 7 | 5 | 855 | 867 | 52 | 26 | 1855 | 1933 | 42 | 2 | 511 | 555 | 1378 |
| 4 | ಚಿಕ್ಕಬಳ್ಳಾಪುರ | 3 | 4 | 1065 | 1072 | 16 | 37 | 1917 | 1970 | 7 | 25 | 339 | 371 | 1599 |
| 5 | ತುಮಕೂರು | 9 | 10 | 2442 | 2461 | 45 | 31 | 2674 | 2750 | 9 | 8 | 905 | 922 | 1828 |
| 5 | ಕೋಲಾರ | 6 | 7 | 1315 | 1328 | 39 | 27 | 2038 | 2104 | 33 | 20 | 634 | 687 | 1417 |
| 7 | ಚಿತ್ರದುರ್ಗ | 4 | 4 | 297 | 305 | 19 | 5 | 420 | 444 | 4 | 4 | 297 | 305 | 139 |
| 8 | ಶಿವಮೊಗ್ಗ | 4 | 2 | 637 | 643 | 38 | 2 | 961 | 1001 | 18 | 2 | 451 | 471 | 530 |
| 9 | ದಾವಣಗೆರೆ | 3 | 7 | 611 | 621 | 4 | 13 | 774 | 791 | 1 | 4 | 539 | 544 | 247 |
| 0 | ಮೈಸೂರು | 5 | 4 | 1302 | 1311 | 35 | 11 | 2018 | 2064 | 35 | 10 | 1389 | 1434 | 630 |
| 1 | ಮಂಡ್ಯ | 10 | 13 | 2099 | 2122 | 70 | 30 | 2888 | 2988 | 41 | 13 | 1448 | 1502 | 1486 |
| 2 | ದಕ್ಷಿಣ ಕನ್ನಡ | 45 | 35 | 415 | 495 | 483 | 181 | 963 | 1627 | 25 | 22 | 376 | 423 | 1204 |
| 3 | ಚಿಕ್ಕ ಮಗಳೂರು | 3 | 9 | 868 | 880 | 8 | 41 | 943 | 992 | 8 | 40 | 477 | 525 | 467 |
| 4 | ಚಾಮರಾಜನಗರ | 2 | 2 | 410 | 414 | 14 | 14 | 545 | 573 | 7 | 13 | 232 | 252 | 321 |
| 5 | ಕೊಡಗು | 3 | | 4 | 7 | 74 | 0 | 41 | 115 | 74 | 0 | 41 | 115 | 0 |
| 6 | ಹಾಸನ | 6 | 6 | 2444 | 2456 | 41 | 14 | 2799 | 2854 | 35 | 13 | 2260 | 2308 | 546 |
| 7 | ಉಡುಪಿ | 25 | 19 | 766 | 810 | 308 | 179 | 788 | 1275 | 25 | 16 | 503 | 544 | 731 |
| 8 | ಗುಲ್ಬರ್ಗಾ | 4 | 2 | 1624 | 1630 | 23 | 10 | 1624 | 1657 | 4 | 1 | 607 | 612 | 1045 |
| 9 | ಯಾದಗಿರಿ | 2 | 3 | 1207 | 1212 | 2 | 11 | 1223 | 1236 | 2 | 3 | 315 | 320 | 916 |
| 0 | ಬಳ್ಳಾರಿ | 3 | 4 | 654 | 661 | 7 | 9 | 697 | 713 | 0 | 1 | 260 | 261 | 452 |
| 1 | ವಿಜಯನಗರ | 10 | 7 | 621 | 638 | 17 | 14 | 760 | 791 | 15 | 14 | 204 | 233 | 558 |
| 2 | ರಾಯಚೂರು | 4 | 1 | 1282 | 1287 | 20 | 2 | 1282 | 1304 | 2 | 1 | 243 | 246 | 1058 |
| 3 | ಕೊಪ್ಪಳ | 3 | 0 | 736 | 739 | 36 | 0 | 783 | 819 | 2 | 0 | 343 | 345 | 474 |
| 4 | ಬೀದರ್ | 7 | 3 | 520 | 530 | 21 | 9 | 1052 | 1082 | 0 | 0 | 49 | 49 | 1033 |
| 5 | ಬೆಳಗಾವಿ | 5 | 5 | 3796 | 3806 | 247 | 12 | 4301 | 4560 | 5 | 5 | 1550 | 1560 | 3000 |
| 6 | ಬಾಗಲಕೋಟೆ | 0 | 1 | 1165 | 1166 | 0 | 1 | 1169 | 1170 | 0 | 1 | 980 | 981 | 189 |
| 7 | ಉತ್ತರ ಕನ್ನಡ | 9 | 8 | 684 | 701 | 49 | 53 | 1357 | 1459 | 9 | 5 | 272 | 286 | 1173 |
| 8 | ಹಾವೇರಿ | 1 | 11 | 1279 | 1291 | 8 | 62 | 1279 | 1349 | 0 | 7 | 408 | 415 | 934 |
| 9 | ವಿಜಯಪುರ | | 1 | 550 | 551 | 0 | 23 | 550 | 573 | 0 | 2 | 463 | 465 | 108 |
| 0 | ಗದಗ್ | 0 | 0 | 1388 | 1388 | 0 | 0 | 1422 | 1422 | 0 | 0 | 907 | 907 | 515 |
| 1 | ಧಾರವಾಡ | 0 | 0 | 930 | 930 | 0 | 0 | 947 | 947 | 0 | 0 | 820 | 820 | 127 |
| | | 208 | 194 | 34164 | 34566 | 1753 | 865 | 42420 | 45038 | 437 | 263 | 20030 | 20730 | 24308 |



File No. RD/81/MSPA/2026-MUZ-REVENUE DEPATMENT SEC (Computer No. 2106551)
Generated from eOffice by MADEV NARASANNAVAR, RD-MUZ-ASST(MN), ASSISTANT, REVENUE DEPARTMENT SEC on 24/03/2026 11:13 AM

| ಕ್ರ.ಸಂ. | ಜಿಲ್ಲೆ ಹಾಗೂ ತಾಲ್ಲೂಕು | ದೇವಾಲಯ-ಧಾರ್ಮಿಕ ಸಂಸ್ಥೆ | ಗ್ರಾಮ | ಸ.ನಂ | ಎಕರೆ | ಗುಂಟೆ |
|---|---|---|---|---|---|---|
| 1 | ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು | ಶ್ರೀ ಚಂದ್ರಮೌಳೇಶ್ವರ ಮತ್ತು ಮಲ್ಲೇ ದೇವರು, ಕೋಟೆಕೆರ | ಕೋಟೆಕೆರ | 212 | 2 | 38 |
| | | ಶ್ರೀ ರಾಮ ಮಂದಿರ , ಕೋಟೆಕೆರ | ಕೋಟೆಕೆರ | 114/1 | 1 | 34 |
| | | ಶ್ರೀ ಗೋಪಾಲ ಸ್ವಾಮಿ, ಕೋಟೆಕೆರ | ಕೋಟೆಕೆರ | 12./1 | 4 | 4 |
| | | | | 14 | 4 | 27 |
| | | | | 305 | 2 | 18 |
| | | | | 372 | 2 | 8 |
| | | ಶ್ರೀ ಗಣಪತಿ, ಕೋಟೆಕೆರ | ಕೋಟೆಕೆರ | 188 | 4 | 34 |
| | | ಶ್ರೀ ಮಾರಮ್ಮ ದೇವಸ್ಥಾನ ಕಗ್ಗಳ | ಕಗ್ಗಳ | 162 | 2 | 33 |
| | | | | 143/2 | 2 | 2 |
| | | ಚಲುವನಾರಾಯಣ ಸ್ವಾಮಿ ಕಗ್ಗಳ | | 153/2 | 2 | 13 |
| | | | | 152/1 | 4 | 9 |
| | | ಶ್ರೀ ಆಂಜನೇಯ ಸ್ವಾಮಿ, ಹಿರಿಕಾಟಿ | ಹಿರಿಕಾಟಿ | 342 | 5 | 11 |
| | | ಶ್ರೀ ರಾಮೇಶ್ವರ ಬಸವೇಶ್ವರ, ತೊರವಳ್ಳಿ | ತೊರವಳ್ಳಿ | 16/1 | 1 | 22 |
| | | | | 24 | 5 | 17 |
| | | | | 35 | 8 | 16 |
| | | | | 38 | 5 | 21 |
| | | | | 39 | 5 | 0 |
| | | | | | 1 | 13 |
| 2 | | ಶ್ರೀ ರಂಗನಾಥಸ್ವಾಮಿ ದೇವಾಲಯ, ಶ್ರೀರಂಗಪಟ್ಟಣ | ಚೋಳನಾಯಕನಹಳ್ಳಿ(ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ) | | 48 | 33 |
| 3 | | ಧರ್ಮರಾಯ ಸ್ವಾಮಿ ದೇವಾಲಯ, ಹಲಸೂರು ಪೇಟೆ | ನೀಲಸಂದ್ರ ಗ್ರಾಮ, | 79 | 9 | |
| 4 | | ಶ್ರೀ ಆಂಜನೇಯಸ್ವಾಮಿ ಚಳ್ಳಕೆರೆ ಗ್ರಾಮ | ಚಳ್ಳಕೆರೆ | ·59 | 1 | 5 |
| 5 | | ಶ್ರೀ ವೆಂಕಟರಮಣ ಸ್ವಾಮಿ | ಮಹಿಮಾಪುರ ಗ್ರಾಮ | | 9 | 19 |
| | | | | | 87 | 27 |
| 6 | ಹಾಸನ ಜಿಲ್ಲೆ | | | | | |
| 7 | ಮೈಸೂರು ಜಿಲ್ಲೆ, ತಿ | ಶ್ರೀ ಆಂಜನೇಯ ಸ್ವಾಮಿ ದೇವಾಲಯ, ಬೆಣಗಾಲು ಗ್ರಾಮ | ಬೆಣಗಾಲು ಗ್ರಾಮ | 8 | 2 | 0 |
| 8 | ಯಾದಗಿರಿ ಜಿಲ್ಲೆ ಗುರುಮಠ್ ತಾಲ್ಲೂಕು | ಶ್ರೀ ರಾಚಪ್ಪಯ್ಯ ಕಡ್ಲಪ್ಪಯ್ಯ ದೇವಸ್ಥಾನ | | | 59 | 15 |
| 9 | ಚಿಕ್ಕಬಳ್ಳಾಪುರ ಜಿಲ್ಲೆ | ಶ್ರೀ ಸೋಮೇಶ್ವರ ದೇವಾಲಯ, ಸುಗಟೂರು | ಸುಗಟೂರು | 176 | 0 | 30 |
| | | ಶ್ರೀ ಸೋಮೇಶ್ವರ ದೇವಾಲಯ, ಸುಗಟೂರು | ಸುಗಟೂರು | 160 | 1 | 18 |
| | | ಶ್ರೀ ಚನ್ನರಾಯಸ್ವಾಮಿ ದೇವಾಲಯ | ಸುಗಟೂರು | 251 | 3 | 25 |
| | | ಶ್ರೀ ವೆಂಕಟರಮಣ ದೇವಾಲಯ | ವೆಂಕಟಾಪುರ | 77 | 0 | 38 |
| | | | | | 18 | 22 |
| 10 | ತುಮಕೂರು ಜಿಲ್ಲೆ | | | | | |
| | | | | | 296 | 552 |
| | | | | | 309 | 32 |

20/03/2026



File No. RD/93/MSPA/2026-MUZ-REVENUE DEPATMENT SEC (Computer No. 2106869)

Generated from eOffice by KIRAN KUMAR H.A, RD-MUZRAI-SA(KR), SENIOR ASSISTANT, REVENUE DEPARTMENT SEC on 24/03/2026 10:56 AM

ಅಧಿನಿಯಮ 31 ಮೇರ ಅಧಿಸೂಚನ ಹೊರಡಿಸಲು ಸಿದ್ಧಪಡಿಸಿರುವ ಪ್ರಕರಣಗಳ ವಿವರ ಅನುಬಂಧ-4

| ಕ್ರ. ಸಂ | ಜಿಲ್ಲೆ | ಒಟ್ಟು ಅಧಿಸೂಚಿತ ದೇವಾಲಯಗಳ ಸಂಖ್ಯೆ | ಆಯುಕ್ತರ ಕಛೇರಿಗೆ ಇದುವರೆಗೂ ಸ್ವೀಕೃತವಾಗಿರುವ ನಮೂನೆ1(ಸಿ)ಗಳ ಸಂಖ್ಯೆ | ನಮೂನೆ(1ಸಿ) ಮಾನ್ಯ ಆಯುಕ್ತರಿಂದ ಅನುಮೋದನೆಯಾಗಿ ನಮೂನೆ 1(ಡಿ) ಸಿದ್ಧಪಡಿಸಿರುವ ಪ್ರಕರಣಗಳ ಸಂಖ್ಯೆ | ಅಧಿನಿಯಮ 31 ರಡಿ ನಮೂನೆ 1(ಡಿ) ತಯಾರಿಸಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಬಾಕಿ ಇರುವ ದೇವಾಲಯ/ಆಸ್ತಿಗಳ ಸಂಖ್ಯೆ | ರಾಜ್ಯ ಪತ್ರದಲ್ಲಿ ಪ್ರಕಟಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು | ರಾಜ್ಯ ಪತ್ರದಲ್ಲಿ ಪ್ರಕಟವಾಗಿರುವುದು |
|---|---|---|---|---|---|---|---|
| 1 | ಬೆಂಗಳೂರು ನಗರ | 1104 | 15 | | | | |
| 2 | ಬೆಂಗಳೂರು ಗ್ರಾಮಾಂತರ | 1140 | 943 | 804 | 0 | | 804 |
| 3 | ರಾಮನಗರ | 867 | 183 | | | | |
| 4 | ಚಿಕ್ಕಬಳ್ಳಾಪುರ | 1072 | 79 | | | | |
| 5 | ತುಮಕೂರು | 2461 | 90 | | | | |
| 6 | ಕೋಲಾರ | 1328 | 0 | | | | |
| 7 | ಚಿತ್ರದುರ್ಗ | 305 | 222 | 222 | 0 | 222 | |
| 8 | ಶಿವಮೊಗ್ಗ | 643 | 205 | 24 | 0 | | 24 |
| 9 | ದಾವಣಗೆರೆ | 621 | 62 | | | | |
| 10 | ಮೈಸೂರು | 1311 | 633 | 388 | 0 | 265 | 123 |
| 11 | ಮಂಡ್ಯ | 2121 | 75 | | | | |
| 12 | ದಕ್ಷಿಣ ಕನ್ನಡ | 495 | 233 | | | | |
| 13 | ಚಿಕ್ಕ ಮಗಳೂರು | 880 | 221 | 173 | 0 | 173 | |
| 14 | ಚಾಮರಾಜನಗರ | 414 | 121 | | | | |
| 15 | ಕೊಡಗು | 7 | 0 | | | | |
| 16 | ಹಾಸನ | 2456 | 1796 | 311 | 62 | 249 | |
| 17 | ಉಡುಪಿ | 810 | 145 | | | | |
| 18 | ಗುಲ್ಬರ್ಗಾ | 1630 | 622 | 288 | 120 | | 168 |
| 19 | ಯಾದಗಿರಿ | 1212 | 741 | 185 | 185 | | |
| 20 | ಬಳ್ಳಾರಿ | 661 | 319 | | | | |
| 21 | ವಿಜಯನಗರ | 638 | 0 | | | | |
| 22 | ರಾಯಚೂರು | 1287 | 256 | | | | |
| 23 | ಕೊಪ್ಪಳ | 739 | 407 | 340 | 0 | 340 | |
| 24 | ಬೀದರ್ | 530 | 114 | | | | |
| 25 | ಬೆಳಗಾವಿ | 3806 | 1132 | 386 | 201 | | 185 |
| 26 | ಬಾಗಲಕೋಟೆ | 1166 | 825 | | | | |
| 27 | ಉತ್ತರ ಕನ್ನಡ | 701 | 325 | | | | |
| 28 | ಹಾವೇರಿ | 1291 | 113 | | | | |
| 29 | ವಿಜಯಪುರ | 551 | 409 | 308 | 0 | | 308 |
| 30 | ಗದಗ್ | 1388 | 301 | 188 | 0 | | 188 |
| 31 | ಧಾರವಾಡ | 930 | 474 | | | | |
| | ಒಟ್ಟು | 34565 | 11061 | 3617 | 568 | 1249 | 1800 |